ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಸರ್ವ ಶಿಕ್ಷಣ ಅಭಿಯಾನ

# ಚಿಣ್ಣರ ಚೇತನ

ಸೆಪ್ಟೆಂಬರ್ 2009

ಓ ನನ್ನ ಚೇತನಾ ಆಗು ನೀ ಅನಿಕೇತನ

## ತಿಳಿ ಬೆಳಿ

### ಭತ್ತದ ಸುತ್ತಮುತ್ತ



ನೂತನ ಶಿಲಾಯುಗದ ಕಾಲದಲ್ಲಿ ಭತ್ತ ಬೆಳೆಯುವ ಗದ್ದೆಗಳು ಇದ್ದವೆಂದು ಸಂಶೋಧಕರು ಕಂಡು ಹಿಡಿದಿದ್ದಾರೆ. ಅಂದರೆ ಕ್ರಿಸ್ತ ಪೂರ್ವ 7000 ವರ್ಷಗಳಿಗೂ ಮೊದಲು. ನಮ್ಮ ದೇಶದಲ್ಲಿ ಉತ್ತರ ಪ್ರದೇಶದ ಅಲಹಾಬಾದ್ ಹಾಗೂ ಗೋರಖ್‌ಪುರ ಜಿಲ್ಲೆಗಳಲ್ಲಿ ಭತ್ತದ ಬೇಸಾಯದ ಕುರುಹುಗಳು ದೊರೆತಿವೆ.

### ಭೂಪ್ರದಕ್ಷಿಣೆಗೆ ಬನ್ನಿ

ಗಣೇಶ ಇಲಿಯ ಮೇಲೆ ಕೂತು ಕ್ಷಣಾರ್ಧದಲ್ಲಿ ಭೂಪ್ರದಕ್ಷಿಣೆ ಹಾಕಿದ ಕತೆ ನಿಮಗೆ ನೆನಪಿದೆ ತಾನೆ? ಈಗ ನೀವೂ ಹಾಗೆ ಮಾಡಬಹುದು.

ಆದರೆ ಕಂಪ್ಯೂಟರ್ ಇಲಿ(ಮೌಸ್) ಮೇಲೆ ಕೂತರೆ ಮಾತ್ರ! ಹೌದು, ಅಂತರ್ಜಾಲದಲ್ಲಿ ಗೂಗಲ್ ಅರ್ತ್ ಎನ್ನುವ ವಿಶಿಷ್ಟ ಸಂಗತಿಯೊಂದಿದೆ. ಅದನ್ನು ಬಳಸಿ ನೀವು ಕಂಪ್ಯೂಟರ್ ಪರದೆಯ ಮೇಲೆ ನಿಮ್ಮೂರ ಗುಡಿಯನ್ನೂ, ಕೆರೆಯನ್ನೂ ಪತ್ತೆ ಹಚ್ಚಬಹುದು. ನಿಮ್ಮ ಮನೆ ಕಂಡರೂ ಕಂಡೀತು!



ತಾಜ್ ಮಹಲ್, ಆಗ್ರಾ

ಈ ಚಿತ್ರಗಳನ್ನು ತೆಗೆದೋರು ಯಾರು ಎಂಬ ಪ್ರಶ್ನೆ ಮೂಡಿತೆ? ಮಾನವ ಅಂತರಿಕ್ಷಕ್ಕೆ ಕಳಿಸಿರೋ ಉಪಗ್ರಹಗಳು! ಮೇಲಿರುವುದು ಗೂಗಲ್ ಅರ್ತ್‌ನಲ್ಲಿ ಕಂಡ ತಾಜ್‌ಮಹಲ್ ಚಿತ್ರ. ಇದನ್ನು ನೋಡಿ ಕುತೂಹಲ ಉಂಟಾಯಿತೆ? ಹಾಗಾದರೆ http://earth.google.com ಗೆ ಹೋಗಿ ಇನ್ನೇನೆಲ್ಲಾ ಕಾಣುತ್ತೆ ಎಂದು ನೋಡಿ. ನಿಮ್ಮ ಮೇಷ್ಟರ ಸಹಾಯ ಪಡೆಯಿರಿ.

**ಪ್ರಕೃತಿಯಲ್ಲಿ ಪರ್ವತದಂತೆ ಹುಲ್ಲುಕಡ್ಡಿಗೂ ಅಸ್ತಿತ್ವವಿದೆ. ಆನೆಗಿರುವಂತೆ ಇರುವೆಗೂ ಇಲ್ಲಿ ಕೆಲಸವಿದೆ.**

## ಇರುವೆಯ ದೋಸ್ತಿ ಆನೆಯ ಆಸ್ತಿ



ನಿಸರ್ಗದಲ್ಲಿ ಮೇಲುಕೀಳು ಎಂಬುದು ಇಲ್ಲವೇ ಇಲ್ಲ. ಆನೆಯಿಂದ ಇರುವೆಯವರೆಗೆ ಎಲ್ಲದಕ್ಕು ತನ್ನದೇ ಆದ ಸ್ಥಾನಮಾನವಿದೆ. ಹಾಗೆ ನೋಡಿದರೆ ಎಲ್ಲವು ಪರಸ್ಪರ ಅವಲಂಬಿಸಿಯೇ ಬದುಕುವುದು. ಒಂದು ಚಿಕ್ಕ ಇರುವೆ ಆನೆಯಂಥ ದೊಡ್ಡ ಪ್ರಾಣಿಗೆ ಹೇಗೆ ನೆರವಾಗಬಹುದು ಯೋಚಿಸಿದ್ದೀರಾ?

ಬೇಸಿಗೆ ಬಂತೆಂದರೆ ಕಾಡು ಪ್ರಾಣಿಗಳಿಗೆ ತುಂಬಾ ಕಷ್ಟ. ತಿನ್ನಲು ಆಹಾರವಿಲ್ಲ, ಕುಡಿಯಲು ನೀರಿಲ್ಲ. ಅದರಲ್ಲೂ ಆನೆಯಂಥ ಪ್ರಾಣಿಗೆ ದಿನಕ್ಕೆ 200 ಕೆ.ಜಿ.ಯಷ್ಟು ಆಹಾರ ಬೇಕು. ಬೇರೆ ಬೇರೆ ಕಾರಣಗಳಿಗಾಗಿ ಬೇಸಿಗೆಯಲ್ಲಿ ಜನರು ಕಾಡಿಗೆ ಬೆಂಕಿ ಹಾಕಿಬಿಡುತ್ತಾರೆ. ಇಡೀ ಕಾಡು ಸುಟ್ಟು ಬೂದಿ ಆಗುವಾಗ ಆನೆ, ಜಿಂಕೆಗಳಿಗೆ ಆಹಾರ ಸಿಗುವುದೇ ಕಷ್ಟ.

ಹೀಗಿರುವಾಗ ಮೊದಲನೇ ಮಳೆ ಬೀಳುತ್ತಿದ್ದಂತೆಯೆ ಕಾಡಿನಲ್ಲಿ ಸಂಭ್ರಮ. ಎಲ್ಲೆಲ್ಲೂ ಹಸಿರು ಚಿಗುರುತ್ತದೆ, ಹುಲ್ಲು ಮೊಳಕೆಯೊಡೆಯುತ್ತದೆ. ಕಾಡಿಗೆ ಬೆಂಕಿ ಬಿದ್ದು ಸುಟ್ಟ ಮೇಲೆ ಹುಲ್ಲು ಚಿಗುರುವುದು ಹೇಗೆ?

ಕಾಡಿನಲ್ಲಿ ಜೀವಿಸಿರುವ ಕೋಟಿಗಟ್ಟಲೆ ಇರುವೆಗಳು ಬೇಸಿಗೆ ಕಾಲದಲ್ಲಿ ಹುಲ್ಲು ಬೀಜಗಳನ್ನು ಆಯ್ದು ತಮ್ಮ ಗೂಡಿಗೆ ಒಯ್ದು ಶೇಖರಿಸಿ ಇಟ್ಟಿರುತ್ತವೆ. ಜನರು ಹಾಕುವ ಬೆಂಕಿ, ಕಾಡಿನ ನೆಲವನ್ನು ಸುಟ್ಟರೂ ನೆಲದ ಒಳಗೆ ಇರುವ ಇರುವೆಗಳ ಗೂಡಿಗೆ ಏನೂ ತೊಂದರೆ ಇಲ್ಲ. ಗೂಡಿನಲ್ಲಿರುವ ಇರುವೆಗಳೂ, ಅವು ಗೂಡಿನಲ್ಲಿ ಇಟ್ಟುಕೊಂಡ ಹುಲ್ಲಿನ ಬೀಜಗಳೂ ಸುರಕ್ಷಿತ. ಮಳೆ ಬೀಳುತ್ತಿದ್ದಂತೆಯೇ ಈ ಹುಲ್ಲಿನ ಬೀಜಗಳು ಮೊಳಕೆಯೊಡೆದು ಕಾಡಿನಲ್ಲೆಲ್ಲಾ ಹೊಸ ಹುಲ್ಲು ಬೆಳೆಯುತ್ತದೆ. ಇನ್ನು ಆನೆಗಳಿಗೆ ಆಹಾರಕ್ಕೇನೂ ಕೊರತೆಯಾಗದು.

ಆನೆಗೆ ಉಪಕಾರ ಮಾಡುವ ಇರುವೆಯನ್ನು ಕನಿಷ್ಠ ಜೀವಿ ಎನ್ನುವಂತಿಲ್ಲ ಅಲ್ಲವೆ?



## ದಸರಾ ಬಂತು ದಸರಾ!

ದಸರಾ ಅಂದ್ರೆ ನಿಮಗೆ ಖುಷಿಯೋ ಖುಷಿ! ಒಂಭತ್ತು ದಿನಗಳ ದಸರಾ ಕೊನೆಯ ದಿವಸ ವಿಜಯದಶಮಿ ಆಚರಿಸುವದೊಂದಿಗೆ ಮುಕ್ತಾಯಗೊಳ್ಳುತ್ತದೆ. ಶ್ರೀರಾಮ ರಾವಣನ ಮೇಲೆ ವಿಜಯ ಸಾಧಿಸಿದ ದಿನ ಅದು. ಪಾಂಡವರು ಶಮಿವೃಕ್ಷದಲ್ಲಿ ಅಡಗಿಸಿಟ್ಟಿದ್ದ ಶಸ್ತ್ರಗಳನ್ನು ಹೊರತೆಗೆದು ಕುರುಕ್ಷೇತ್ರ ಯುದ್ಧಕ್ಕೆ ಸಿದ್ಧರಾದ ದಿನ. ಚಾಮುಂಡೇಶ್ವರಿಯು ಒಂಭತ್ತು ದಿನ ಮಹಿಷಾಸುರನೊಂದಿಗೆ ಹೋರಾಡಿ ಅವನನ್ನು ಸಂಹರಿಸಿದ ದಿನ.

ಹೊಸ ಸಂಕಲ್ಪಗಳನ್ನು ತಳೆಯಲು ವಿಜಯದಶಮಿ ಪವಿತ್ರ ದಿನ. ಚಿಣ್ಣರೇ, ಉತ್ತಮ ಅಂಕ ಗಳಿಸುವ ಸಂಕಲ್ಪ ತೊಡಲು ಅಂದು ಮರೆಯಬೇಡಿ.

## ನಾ ಲ ಗೆ ತಿ ರು ಗ ಲ್ವಾ ?!

ಈ ಕೆಳಗಿನ ಸಾಲುಗಳನ್ನು ಸ್ವಲ್ಪವೂ ತೊದಲದೆ ಬೇಗ ಬೇಗ ಹೇಳುತ್ತೀರಾ?!!

●ಕೆಂಪು ಕಾಲುಚೀಲ, ಕಪ್ಪು ಕಾಲುಚೀಲ ●ಗಿಡತಳಿರೊಡೆದೆರಡೆಲೆಯಾಯಿತು (ಬಿಡಿಸಿದಾಗ : ಗಿಡ, ತಳಿರು, ಒಡೆದು, ಎರಡು, ಎಲೆ, ಆಯಿತು)

## ಗ ಡಿ ಬಿ ಡಿ ಗೋಪಾಲ



ನಮ್ಮ ಗೋಪಾಲ ಜಾಣನೇ, ಆದರೆ ಒಂದೊಂದ್ ಸಲ ಹೀಗೆ ಗಡಿಬಿಡಿ ಮಾಡಿಕೊಂಡು ಕಷ್ಟದಲ್ಲಿ ಸಿಕ್ಕಿಹಾಕಿಕೊಳ್ತಾನೆ. ನೋಡಿ ನೀವೇನಾದ್ರೂ ಸಹಾಯ ಮಾಡೋಕಾಗತ್ತಾ ಅಂತ.

ಗೋಪಾಲ ಒಂದು ಜತೆ ಕಾಲುಚೀಲ ತಗೋಬೇಕು ಅಂತ ಅಂಗಡಿಗೆ ಹೋಗ್ತಾನೆ. ಅಂಗಡಿಯವನು ಒಂದು ಪೆಟ್ಟಿಗೆ ಕೊಟ್ಟು 'ಇದ್ರಲ್ಲಿ 10 ಕೆಂಪು ಕಾಲುಚೀಲ, 8 ಕಪ್ಪು ಕಾಲುಚೀಲ ಇವೆ, ಯಾವುದು ಬೇಕು ಆರಿಸಿಕೊ' ಅಂತಾನೆ. ಗೋಪಾಲ ಅದರೊಳಗೆ ಇಣುಕಿ ನೋಡುವಷ್ಟರಲ್ಲಿ ಕರೆಂಟು ಹೋಗಿಬಿಡುತ್ತೆ! ಈಗ ಗೋಪಾಲ ಕತ್ತಲಲ್ಲಿ ಕೈಗೆ ಸಿಕ್ಕ ಒಂದಷ್ಟು ಕಾಲುಚೀಲ ತಗೊಂಡು ದುಡ್ಡು ಕೊಟ್ಟು ಮನೆಗೆ ಬಂದು ಬಣ್ಣ ಪರೀಕ್ಷೆ ಮಾಡಬೇಕು.

ಒಂದೇ ಬಣ್ಣದ ಎರಡು ಕಾಲುಚೀಲ ಗ್ಯಾರಂಟಿಯಾಗಿ ಬರಬೇಕೂಂದ್ರೆ ಕನಿಷ್ಟ ಎಷ್ಟು ಕಾಲುಚೀಲ ಕೊಂಡ್ಕೋಬೇಕು ಅಂತ ಅವನಿಗೆ ಗೊತ್ತಾಗ್ತಾ ಇಲ್ಲ. ನೀವು ಅವನಿಗೆ ಉತ್ತರ ಹೇಳ್ತೀರಾ? (ಉತ್ತರ ಮುಂದಿನ ಸಂಚಿಕೆಯಲ್ಲಿ)

### ಒಗಟು ಬಿಡಿಸಿ

ಕಡೆ ಬಿಳಿದು ನಡುಗಪ್ಪು ವಸ್ತ್ರವದಲ್ಲ  
ಬಿಡದೆ ನೀರುಂಟು ಮಡುವಲ್ಲ ಕವಿಗಳೇ  
ಬೆಡಗ ಪೇಳುವದು ಸರ್ವಜ್ಞ

(ಉತ್ತರ ಮುಂದಿನ ಸಂಚಿಕೆಯಲ್ಲಿ)



## ಟಿಫನ್ ಆಯ್ತಾ?

ಉಪ್ಪಿಟ್ಟು ಬೇಡ, ಚಿತ್ರಾನ್ನ ಬೇಡ ಅಂತ ಅಮ್ಮನ ಹತ್ರ ರಂಪ ಮಾಡ್ತೀರಾ? ಆದೇನೇ ಇದ್ರೂ ಬೆಳಗಿನ ಉಪಾಹಾರ ತಿನ್ನದೆ ಮಾತ್ರ ಇರಬೇಡಿ. ಯಾಕೆ ಗೊತ್ತೆ?

ರಾತ್ರಿ 8 ಗಂಟೆ ಹೊತ್ತಿಗೆ ಊಟ ಮಾಡಿ ನಾವು ಮಲಗುತ್ತೇವೆ. ದೇಹದ ಪಚನ ಕ್ರಿಯೆಯ ಅಂಗಗಳಿಗೆ ಇಡೀ ರಾತ್ರಿ ಕೆಲಸವಿರುವುದಿಲ್ಲ. ಬೆಳಗ್ಗೆ ನೀವು ಟಿಫನ್ ತಿನ್ನುವಾಗ ಅವು ಮತ್ತೆ ಚುರುಕಾಗತೊಡಗುತ್ತವೆ. ಮಧ್ಯಾಹ್ನದ ಹೊತ್ತಿಗೆ ಆಹಾರವನ್ನು ಸರಿಯಾಗಿ ಪಚನಗೊಳಿಸಲು ಸಜ್ಜಾಗುತ್ತವೆ.

ಬೆಳಗಿನ ಉಪಾಹಾರ ಬೋರು ಅಂತ ಬಿಟ್ಟುಬಿಟ್ಟರೆ ದೇಹದ ಜೀರ್ಣಾಂಗ ವ್ಯವಸ್ಥೆ ಮಧ್ಯಾಹ್ನದವರೆಗೂ ನಿದ್ದೆ ಮಾಡುತ್ತ ಇರುತ್ತದೆ. ಮಧ್ಯಾಹ್ನದ ಊಟವನ್ನು ಜೀರ್ಣಗೊಳಿಸಲು ಅದಕ್ಕೆ ಕಷ್ಟವಾಗುತ್ತದೆ. ಹಾಗಾಗಿ ತಿಂದ ಆಹಾರದ ಬಹುಭಾಗ ಕೊಬ್ಬಾಗಿ ಶೇಖರಗೊಂಡು ದೇಹ ಧಡೂತಿಯಾಗುತ್ತೆ!

## ಸುದ್ದಿ ಗೊತ್ತಾಯ್ತಾ?

ಚೀನಾ ದೇಶವು ಭಾರತದ ಅಂತರಾಷ್ಟ್ರೀಯ ಸೀಮಾರೇಖೆಯನ್ನು ಉಲ್ಲಂಘಿಸಿದೆ. ಚೀನೀ ಸೈನಿಕರು ಲಡಾಖ್ ಬಳಿಯ ಪರ್ವತ ಪ್ರದೇಶದಲ್ಲಿ ಒಂದೂವರೆ ಕಿಲೋಮೀಟರ್ ದೂರ ಅತಿಕ್ರಮ ಪ್ರವೇಶ ಮಾಡಿದ್ದಾರೆ.

ಕರ್ನಾಟಕದ ಮುಖ್ಯಮಂತ್ರಿ ಚೀನಾಗೆ ತೆರಳಿ ಅಲ್ಲಿನ ರೈತರೊಂದಿಗೆ ವಿಚಾರ ವಿನಿಮಯ ನಡೆಸಿ, ಉಪಯುಕ್ತ ಮಾಹಿತಿಗಳೊಂದಿಗೆ ಹಿಂದಿರುಗಿದ್ದಾರೆ.

139 ಗಂಟೆಗಳ ಕಾಲ ಇನ್ನಿಲ್ಲದಂತೆ ಪ್ರಯತ್ನ ನಡೆಸಿದರೂ ವಿಜಾಪುರದ ದೇವರ ನಿಂಬರಗಿ ಗ್ರಾಮದಲ್ಲಿ ಕೊಳವೆಬಾವಿಗೆ ಬಿದ್ದ ಕಾಂಚನಾ ಎಂಬ ಬಾಲಕಿಯನ್ನು ಉಳಿಸಲಾಗಲಿಲ್ಲ.

ಕೆಟ್ಟ ಹವಾಮಾನದಿಂದಾಗಿ ಹೆಲಿಕಾಪ್ಟರ್ ಅಪಘಾತಕ್ಕೀಡಾದ ಪರಿಣಾಮ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ವೈ. ಎಸ್. ರಾಜಶೇಖರ ರೆಡ್ಡಿ ಮೃತರಾದರು.



ಬಹಳ ಹಿಂದಿನಿಂದಲೂ ನೇಪಾಳದ ಜಗತ್ಪ್ರಸಿದ್ಧ ಪಶುಪತಿನಾಥ ದೇಗುಲದಲ್ಲಿ ಕರ್ನಾಟಕದ ಅರ್ಚಕರು ಪೂಜೆ ನಡೆಸುತ್ತಾ ಬಂದಿದ್ದಾರೆ. ಈಚೆಗೆ ಅವರ ಮೇಲೆ ಹಲ್ಲೆ ನಡೆದದ್ದು ಆತಂಕದ ವಿಷಯ.

ಒಂದೆಡೆ ಮಳೆ, ಇನ್ನೊಂದೆಡೆ ಬರ. ರಾಜ್ಯದ ಮಲೆನಾಡು ಮತ್ತು ಕರಾವಳಿಯಲ್ಲಿ ಜೋರು ಮಳೆ ಸುರಿಯುತ್ತಿದ್ದರೆ ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಕುಡಿವ ನೀರಿಗೂ ಹಾಹಾಕಾರ.

## ಭಲೇ ಭುಟಿಯಾ!

ಸಚಿನ್ ತೆಂಡುಲ್ಕರ್, ಕಪಿಲ್ ದೇವ್, ಸುನಿಲ್ ಗವಾಸ್ಕರ್ ಎಂಬ ಹೆಸರುಗಳು ನಿಮಗೆ ಚೆನ್ನಾಗಿ ಗೊತ್ತು. ಆದರೆ ಬೈಚುಂಗ್ ಭುಟಿಯಾ ಎಂಬ ಹೆಸರನ್ನು ಕೇಳಿದ್ದೀರಾ? ಆತ ನಮ್ಮ ದೇಶದ ಫುಟ್‌ಬಾಲ್ ಆಟದ ಶ್ರೇಷ್ಠ ಪಟು.

ಈವರೆಗೆ ಭಾರತವು ಫುಟ್‌ಬಾಲ್ ಕ್ರೀಡೆಯಲ್ಲಿ ಹೆಚ್ಚಿನ ಸಾಧನೆ ತೋರಿಸಿಲ್ಲ. ಸೆಪ್ಟೆಂಬರ್ 1ನೆಯ ತಾರೀಕು ನವದೆಹಲಿಯಲ್ಲಿ ನಡೆದ 'ನೆಹ್ರು ಕಪ್' ಫುಟ್‌ಬಾಲ್ ಪಂದ್ಯದಲ್ಲಿ ಸಿರಿಯಾ ದೇಶವನ್ನು ಸೋಲಿಸಿ ಭಾರತವು ಮಹತ್ವದ ಗೆಲುವನ್ನು ಸಾಧಿಸಿತು.

ಭಾರತದ ತಂಡದ ನಾಯಕನೇ ಬೈಚುಂಗ್ ಭುಟಿಯಾ! 100 ಅಂತಾರಾಷ್ಟ್ರೀಯ ಫುಟ್‌ಬಾಲ್ ಪಂದ್ಯಗಳಲ್ಲಿ ಆಡಿದ ಮೊದಲನೆಯ ಭಾರತೀಯ ಕ್ರೀಡಾಪಟು! ಈ ಪಂದ್ಯಗಳಲ್ಲಿ 50ಕ್ಕೂ ಹೆಚ್ಚು ಗೋಲುಗಳನ್ನು ಮಾಡಿದ ಧೀರ!

33 ವರ್ಷದ ಭುಟಿಯಾ ಹಿಮಾಲಯ ತಪ್ಪಲಿನ ಸಿಕ್ಕಿಂ ರಾಜ್ಯದ ಟಿಂಕಿಟಮ್ ಎಂಬ ಕುಗ್ರಾಮಕ್ಕೆ ಸೇರಿದವರು. ರೈತ ಮನೆತನದಲ್ಲಿ ಹುಟ್ಟಿ 16ನೆಯ ವಯಸ್ಸಿನಿಂದ ಚೆನ್ನಾಗಿ ಅಭ್ಯಾಸ ಮಾಡಿ ಭಾರತದ ಶ್ರೇಷ್ಠ ಫುಟ್‌ಬಾಲ್ ಪಟು ಅನ್ನಿಸಿಕೊಂಡಿದ್ದಾರೆ.

2010ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ FIFA* ವಿಶ್ವಕಪ್ ಫುಟ್‌ಬಾಲ್ ಪಂದ್ಯ ನಡೆಯಲಿದೆ. ಭಾರತ ತಂಡ ಅಲ್ಲಿ ಜಯಗಳಿಸಲು ಅಭ್ಯಾಸ ನಡೆಸುತ್ತಿದೆ.



*FIFA ಅಂದರೆ 'ಫೆಡರೇಷನ್ ಇಂಟರ್‌ನ್ಯಾಷನಲ್ ಡಿ ಫುಟ್‌ಬಾಲ್ ಅಸೋಸಿಯೇಷನ್'

ಪತ್ರಿಕೆ ಹೇಗಿದೆ? ನಮಗೆ ಪತ್ರ ಬರೆಯಿರಿ:

ಸಂಪಾದಕರು  
ಚಿಣ್ಣರ ಚೇತನ (ಶಾಲಾ ಮಕ್ಕಳ ಗೋಡೆ ಪತ್ರಿಕೆ)  
ಅದಮ್ಯ ಚೇತನ, ಅನ್ನಪೂರ್ಣ,  
ಸಮುದಾಯ ಭವನ, ಕೆಂಪೇಗೌಡನಗರ,  
ಬೆಂಗಳೂರು 560 019

ಸರ್ವ ಶಿಕ್ಷಣ ಅಭಿಯಾನ  
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಅದಮ್ಯ ಚೇತನ ಬೆಂಗಳೂರು

ಚಿಣ್ಣರ ಚೇತನ–ಶಾಲಾ ಮಕ್ಕಳ ಗೋಡೆ ಪತ್ರಿಕೆ. ಕರ್ನಾಟಕ ಸರ್ಕಾರವು ಸರ್ವಶಿಕ್ಷಣ ಅಭಿಯಾನ ಮತ್ತು ಅದಮ್ಯ ಚೇತನ ಸಂಸ್ಥೆ– ಇವರ ಸಹಭಾಗಿತ್ವದಲ್ಲಿ ಪ್ರಕಾಶಿಸಿದೆ.

© ಹಕ್ಕುಗಳನ್ನು ಕಾದಿರಿಸಲಾಗಿದೆ